

بسم اللهِ الرّحمٰن الرّحيم

# ವಾಗ್ದತ್ತ ಮಸೀಹರ ಆಗಮನ ಉದ್ದೇಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31-07-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಇಂದು ಬೆಳಿಗ್ಗೆ ನಾವು ಈದ್ ಸಹ ನಿರ್ವಹಿಸಿದೆವು ಹಾಗೂ ಇಂದು ಜುಮುಅ ಸಹ ಇದೆ. ಈದ್ ಮತ್ತು ಜುಮುಅ ಒಂದೇ ದಿನ ಬರುವುದಾದರೆ, ಜುಮುಅ ನಮಾಝ್ ಬದಲಿಗೆ ಝುಹರ್ ನಮಾಝ್ ಅನುಷ್ಠಿಸಲು ಇಚ್ಛಿಸುವವರಿಗೆ ಅದರ ಅನುಮತಿ ಇದೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶನವಿದೆ. ಆದರೆ ಅಂತಹ ಒಂದು ಸಂದರ್ಭ ಬಂದಾಗ ನಾವು ಜುಮುಅ ನಿರ್ವಹಿಸುತ್ತೇವೆ ಎಂದು ಹೇಳುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅ ನಿರ್ವಹಿಸಿದರು. ಆದ್ದರಿಂದ ಝುಹರ್ ನಮಾಝ್ ನಿರ್ವಹಿಸಲು ಇಚ್ಛಿಸುವವರು ಜಮಾಅತಾಗಿ ಝುಹರ್ ನಮಾಝ್ ನಿರ್ವಹಿಸಲಿ, ಜುಮುಅ ನಡೆಸಬೇಕಾಗಿಲ್ಲ ಎಂದು ನಾನು ಅಮೀರ್ ಸಾಹಿಬರೊಡನೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ನಿರ್ದೇಶನದ ಬೆಳಕಿನಲ್ಲಿ ಹೇಳಿದ್ದೆ. ಅದಲ್ಲದೆ ಈಗಿನ ಸ್ಥಿತಿಯಲ್ಲಿ ಅಧಿಕ ಜನರು ಮಸೀದಿಯಲ್ಲಿ ಬಂದು ಸೇರಲು ಸಾಧ್ಯವೂ ಇಲ್ಲ. ಎಲ್ಲರೂ ಮನೆಯಲ್ಲೇ ಇದ್ದಾರೆ. ಮನೆಯಲ್ಲಿ ಪುರಸೊತ್ತಿದ್ದರೆ ಮುಂಚೆ ಜುಮುಅ ನಿರ್ವಹಿಸುತ್ತಿದ್ದ ಹಾಗೆಯೇ ಈಗಲೂ ನಿರ್ವಹಿಸಬಹುದಾಗಿದೆ. ಅದಕ್ಕೆ ಸೌಕರ್ಯ ಇಲ್ಲದವರು ಝುಹರ್ ನಮಾಝ್ ನಿರ್ವಹಿಸಬಹುದಾಗಿದೆ. ಆದರೆ ನಾವು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದ್ದನ್ನು ಅನುಸರಿಸುತ್ತಾ ಇಂದು ಜುಮುಅ ನಿರ್ವಹಿಸುತ್ತಿದ್ದೇವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಒಂದು ಬಾರಿ ಈದುಲ್ ಅಝ್‌ಹಾ ಮತ್ತು ಜುಮುಅ ಒಂದೇ ದಿನ ಬಂದಾಗ, ಝುಹರ್ ನಮಾಝ್ ಅನುಷ್ಠಿಸಬೇಕು, ಜುಮುಅ ನಡೆಸಬಾರದು ಎಂದೆಲ್ಲ ಹೇಳಿ ಕೆಲವು ಜನರು ತಮ್ಮದಾದ ಪುರಾವೆಗಳನ್ನು ಮುಂದಿರಿಸಿದರು. ಇವರಿಗೆ ಬಹಳ ಉತ್ತಮವಾದ ಜವಾಬು ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: ನಮ್ಮ ಪರಿಪಾಲಕನಾದ ಅಲ್ಲಾಹನು ಎಷ್ಟು ಉದಾರಿಯಾಗಿರುವನು, ಅವನು ನಮಗೆ ಎರಡು ಈದ್‌ಗಳನ್ನು ದಯಪಾಲಿಸಿದನು. ಒಬ್ಬನಿಗೆ ತುಪ್ಪ ಹಾಕಿದ ಎರಡು ಚಪಾತಿಗಳು ಸಿಗುವಾಗ, ಅದರಲ್ಲಿ ಒಂದನ್ನು ತಿರಸ್ಕರಿಸುವನೇ? ಏನಾದರೂ ಅನಿವಾರ್ಯತೆ ಇಲ್ಲವಾದರೆ, ಅವನು ಎರಡನ್ನೂ ಸ್ವೀಕರಿಸುವನು. ಆದುದರಿಂದ ಯಾರಾದರೂ ಜುಮುಅ ನಿರ್ವಹಿಸದೇ ಝುಹರ್ ನಮಾಝನ್ನು ಅನುಷ್ಠಿಸುವವರಾದರೆ, ಅವರನ್ನು ದೂಷಿಸಬಾರದು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿರುವರು. ಅದೇ ರೀತಿ ಈದ್ ನಮಾಝ್ ಮತ್ತು ಜುಮುಅ ನಮಾಝ್, ಎರಡನ್ನೂ ನಿರ್ವಹಿಸುವ ಸೌಭಾಗ್ಯ ಲಭಿಸಿದವನನ್ನು ಇತರರು ಆಕ್ಷೇಪಿಸಲೂ ಬಾರದು. ಅನುಮತಿಯಿಂದ ಪ್ರಯೋಜನ ಪಡೆಯಲಿಲ್ಲ ಎಂದು ಹೇಳಿ ಮೂದಲಿಸಬಾರದು. ಅನುಮತಿ ಇದ್ದರೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅ ನಿರ್ವಹಿಸಿದ್ದಾಗಿ, ಅವರ ಚರ್ಯೆಯಿಂದ ನಮಗೆ ತಿಳಿದುಬರುತ್ತದೆ. ಹೇಗಿದ್ದರೂ, ನಾನು ಹೇಳಿದಂತೆ ಇಂದು ನಾವು ಜುಮುಅ ನಿರ್ವಹಿಸುತ್ತಿದ್ದೇವೆ, ಆದರೆ ಹ್ರಸ್ವವಾದ ಖುತ್‌ಬ ನೀಡುವೆನು. ಇದಕ್ಕಾಗಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಲ್ಲೇಖಗಳನ್ನು ತಂದಿದ್ದೇನೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಆವಿರ್ಭಾವದ ಉದ್ದೇಶವನ್ನು ತಿಳಿಸಿರುವರು. ತನ್ನ ಜಮಾಅತ್ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವುದರ ಮತ್ತು ಯಥಾರ್ಥದಲ್ಲಿ ಅವರೇ ಜೀವಂತ ಪ್ರವಾದಿ ಎಂಬುದರ ಕುರಿತು ಜ್ಞಾನಭರಿತವಾಗಿ ವಿವರಿಸಿರುವರು ಹಾಗೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಪದವಿಯನ್ನು ಸಹ ಹೇಳಿರುವರು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಕಾರಣ ನಾವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಮಹಿಮೆಯನ್ನು ಕಡಿಮೆಗೊಳಿಸಿದ್ದೇವೆ ಎಂದು ಹೇಳಿ ವಿರೋಧಿಗಳು ನಮ್ಮ ಮೇಲೆ ಆರೋಪ ಹೊರಿಸುತ್ತಾರೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನೊಂದಿಗೆ ಖಾತಮುನ್ನಬಿಯ್ಯೀನ್ ಎಂಬ ಪದ ಬರೆಯುವುದನ್ನು ಪಾಕಿಸ್ತಾನದ ಅಸೆಂಬ್ಲಿಯಲ್ಲಿ ಕಾನೂನು ಜಾರಿಗೊಳಿಸುವುದರ ಮೂಲಕ ಕಡ್ಡಾಯಗೊಳಿಸಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನಿರುವ ಪ್ರೇಮ ಮತ್ತು ಪದವಿಯನ್ನು ಶಕ್ತವಾದ ರೀತಿಯಲ್ಲಿ ಪ್ರಕಟಿಸಿದ್ದೇವೆ ಎಂದು ನಮ್ಮ ವಿರೋಧಿಗಳು ಭಾವಿಸುತ್ತಾರೆ. ಅವರ ಹೃದಯಗಳೂ ನಿಜವಾಗಿ ಈ ಮಾತಿಗೆ ಸಾಕ್ಷ್ಯವಹಿಸಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಮಾದರಿಯನ್ನು ಅನುಸರಿಸುವುದಾದರೆ, ಅದು ಖಂಡಿತವಾಗಿಯೂ ಒಳ್ಳೆಯ ಸಂಗತಿಯಾಗಿದೆ. ಆದರೆ ಅವರ

ನಡವಳಿಕೆಗಳಾದರೋ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ್ದ ಪಾಠಗಳಿಂದ ಅವರನ್ನು ಬಹಳ ದೂರ ಸರಿಸಿವೆ. ಖಾತಮುನ್ನಬಿಯ್ಯೀನ್ ಎಂಬ ಪದ ಬರೆಯುವುದನ್ನು ಕಡ್ಡಾಯಗೊಳಿಸುವುದರ ಮೂಲಕ ಮಹತ್ಕಾರ್ಯವನ್ನು ಮಾಡಿ, ಅಹ್ಮದಿಯರ ಮಾರ್ಗದಲ್ಲಿ ಒಂದು ತಡೆಯನ್ನು ಸೃಷ್ಟಿಸಿದ್ದೇವೆಂದು ಇವರು ಭಾವಿಸುತ್ತಾರೆ. ಆದರೆ ಅಹ್ಮದಿಯರು ಎಲ್ಲರಿಗಿಂತ ಹೆಚ್ಚಾಗಿ ಖಾತಮುನ್ನಬಿಯ್ಯೀನ್ ಎಂಬ ಪದವಿಯ ಬಗ್ಗೆ ತಿಳಿದವರೆಂದು ಈ ಬುದ್ಧಿಹೀನರಿಗೆ ಗೊತ್ತಿಲ್ಲ. ಈ ಪರಿಜ್ಞಾನ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳಲ್ಲಿರುವ ಶಕ್ತಿಯ ಸಮೀಪ ಕೂಡ ಇವರಿಗೆ ಬರಲಿಕ್ಕಾಗದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತಿಯೊಂದು ಕ್ಷಣ ಮತ್ತು ಕರ್ಮಗಳಲ್ಲಿ ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲಿರುವ ಪ್ರೀತಿ ಮತ್ತು ಪ್ರೇಮದ ಪ್ರಕಟಣೆಗಳು ಇವೆ. ಈ ಜನರ ಯೋಚನೆ ಕೂಡ ಅಲ್ಲಿಯ ವರೆಗೆ ತಲುಪಲಿಕ್ಕಿಲ್ಲ. ತನ್ನ ನಿಯೋಗದ ಉದ್ದೇಶ ಮತ್ತು ಜಮಾಅತಿನ ಅಭಿವೃದ್ಧಿಯನ್ನು ವಿವರಿಸುತ್ತಾ ಅವರು ತಮ್ಮ ವಿರೋಧಿಗಳನ್ನು ಸಂಬೋಧಿಸುತ್ತಾ ಹೇಳುತ್ತಾರೆ:

ನನ್ನ ಬರುವಿಕೆಗೆ ಎರಡು ಉದ್ದೇಶಗಳಿವೆ. ಒಂದನೆಯದು ಮುಸ್ಲಿಮರ ಉದ್ಧಾರಕ್ಕಾಗಿ. ಅದೇನೆಂದರೆ, ಅವರು ನೈಜ ದೇವಭಕ್ತಿ ಮತ್ತು ಪರಿಶುದ್ಧತೆಯಲ್ಲಿ ನೆಲೆನಿಲ್ಲಬೇಕೆಂಬುವುದಾಗಿದೆ. ಅವರು ಮುಸ್ಲಿಮ್ ಎಂಬ ಪದದಿಂದ ಅಲ್ಲಾಹನು ಉದ್ದೇಶಿಸುವಂತಹ ನೈಜ ಮುಸ್ಲಿಮ್ ಆಗಬೇಕು. ಎಂದರೆ, ಪರಿಪೂರ್ಣವಾದ ವಿಧೇಯತೆಯೊಂದಿಗೆ ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವುದು. ಎರಡನೇ ಉದ್ದೇಶ ಕ್ರೈಸ್ತರಿಗೆ ಸಂಬಂಧಿಸಿರುವುದಾಗಿದೆ. ಅದೇನೆಂದರೆ, ಶಿಲುಬೆಯನ್ನು ಮುರಿಯುವುದು ಮತ್ತು ಅವರ ನಕಲಿ ದೇವನನ್ನು ಇಲ್ಲವಾಗಿಸುವುದು. ಅದನ್ನು ಲೋಕವು ಸಂಪೂರ್ಣವಾಗಿ ಮರೆತುಬಿಟ್ಟು ಏಕದೇವನನ್ನು ಆರಾಧಿಸುವಂತಾಗಬೇಕು. ನನ್ನ ಈ ಉದ್ದೇಶಗಳನ್ನು ನೋಡುತ್ತಾ ಈ ಜನರು ನನ್ನನ್ನೇಕೆ ವಿರೋಧಿಸುತ್ತಾರೆ? ಅಲ್ಲಾಹನ ವೈಭವ ಮತ್ತು ಅವನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹಗಳನ್ನು ಪ್ರಕಟಿಸಲು ಮತ್ತು ಸಾಬೀತುಗೊಳಿಸಲು ಮಾಡುವ ಕಾರ್ಯಗಳನ್ನು ಹಾಗೂ ಅಲ್ಲಾಹನು ತನ್ನ ಕೈಯಿಂದಲೇ ನೆಟ್ಟ ಗಿಡದ ಸಂರಕ್ಷಣೆಯನ್ನು ಮಲಕುಗಳು ಸ್ವತಃ ವಹಿಸುತ್ತಾರೆ. ಇದನ್ನು ಯಾರಿಗೆ ನಾಶಪಡಿಸಲು ಸಾಧ್ಯ? ನನ್ನ ಜಮಾಅತ್ ಕೇವಲ ವ್ಯಾಪಾರ ವಹಿವಾಟು ಆಗಿದ್ದರೆ, ಅದು ಸಂಪೂರ್ಣವಾಗಿ ನಾಶವಾಗುವುದು. ಆದರೆ ಇದು ಅಲ್ಲಾಹನ ಕಡೆಯಿಂದಲೇ ಆಗಿದ್ದರೆ, ಖಂಡಿತವಾಗಿಯೂ ಅಲ್ಲಾಹನ ಕಡೆಯಿಂದಲೇ ಆಗಿರುವಾಗ, ಲೋಕವೆಲ್ಲ ಇದನ್ನು ವಿರೋಧಿಸಿದರೂ ಇದು ಬೆಳೆಯುವುದು, ಹರಡುವುದು ಹಾಗೂ ದೇವದೂತರು ಇದನ್ನು ಸಂರಕ್ಷಿಸುವರು. ನನ್ನೊಂದಿಗೆ ಒಬ್ಬನೇ ಒಬ್ಬ ವ್ಯಕ್ತಿಯಿಲ್ಲವಾದರೂ, ಯಾರ ಸಹಾಯವಿಲ್ಲವಾದರೂ ನನ್ನ ಜಮಾಅತ್ ಜಯಿಸುವುದು ಎಂದು ನಾನು ದೃಢವಾಗಿ ನಂಬುತ್ತೇನೆ. ವಿರೋಧವನ್ನು ನಾನು ಗಮನಿಸುವುದಿಲ್ಲ. ಅದು ಇರುತ್ತದೆ. ಅದನ್ನು ನಾನು ನನ್ನ ಜಮಾಅತಿನ ಅಭಿವೃದ್ಧಿಗೆ ಆವಶ್ಯವೆಂದು ತಿಳಿದಿರುವೆನು. ಅಲ್ಲಾಹನ ಯಾವುದಾದರೂ ಪ್ರವಾದಿ ಅಥವಾ ಖಲೀಫ ಭೂಮಿಗೆ ಬರುವಾಗ ಜನರು ಅವರನ್ನು ಸುಮ್ಮನೆ ಅಂಗೀಕರಿಸುವ ರೀತಿ ಎಂದೂ ಉಂಟಾಗಿಲ್ಲ. ಲೋಕದ ಸ್ಥಿತಿ ವಿಚಿತ್ರವೇ ಆಗಿದೆ. ಮನುಷ್ಯನು ಎಷ್ಟೇ ಸತ್ಯಸಂಧ ಸ್ವಭಾವ ಹೊಂದಿದವನಾಗಿದ್ದರೂ ಇತರರು ಅವನ ಹಿಂದೆ ಬೀಳುತ್ತಾರೆ. ಅವರನ್ನು ಆಕ್ಷೇಪಿಸುತ್ತಿರುತ್ತಾರೆ. ನಮ್ಮ ಜಮಾಅತ್ ಅಲ್ಲಾಹನ ಅನುಗ್ರಹದಿಂದ ಅಸಾಮಾನ್ಯವಾದ ರೀತಿಯಲ್ಲಿ ಪ್ರಗತಿ ಹೊಂದುತ್ತಿದೆ.

ಇಂದು ಇನ್ನೂರಕ್ಕಿಂತ ಅಧಿಕ ದೇಶಗಳಲ್ಲಿ ನಿಷ್ಠಾವಂತರು, ಅಂದರೆ ಬೈಅತ್ ಮಾಡಿರುವವರು ಇರುವುದಾಗಿ ನಾವು ನೋಡುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಕಾಲದಲ್ಲಿ ನೂರಾರು ಜನರಿದ್ದರು. ಈಗ ಅಲ್ಲಾಹನ ಅನುಗ್ರಹದಿಂದ ಲಕ್ಷಗಟ್ಟಲೆ ಬೈಅತ್‌ಗಳು ಪ್ರತಿವರ್ಷ ಆಗುತ್ತಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜನರು ಲೋಕದ ಕೊಳಕುಗಳಿಂದ ಹೊರಬಂದು ನೈಜ ಪರಿಶುದ್ಧಿಯನ್ನು ಪಡೆದುಕೊಂಡು ಮಲಕುಗಳ ರೀತಿಯ ಜೀವನವನ್ನು ಸಾಗಿಸಬೇಕೆಂಬುದೇ ಈ ಜಮಾಅತಿನ ಸ್ಥಾಪನೆಯ ಯಥಾರ್ಥ ಉದ್ದೇಶವಾಗಿದೆ.

ಆದ್ದರಿಂದ ನಾವು ಅವರ ಉಪದೇಶಗಳಂತೆ ನಮ್ಮ ಅವಸ್ಥೆಗಳನ್ನು ಇಸ್ಲಾಮಿನ ಸರಿಯಾದ ಪಾಠಗಳ ಪ್ರಕಾರ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಶತ್ರುಗಳ ಬಾಯನ್ನು ಮುಚ್ಚಲು ಮತ್ತು ಅವರ ಮೇಲೆ ವಿಜಯ ಸಾಧಿಸಲು ಇದೇ ಸರಿಯಾದ ಮಾರ್ಗವಾಗಿದೆ.

ಅನಂತರ ತನ್ನ ಜಮಾಅತಿನ ಪರಿಪಕ್ವವಾದ ವಿಶ್ವಾಸ ಮತ್ತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಇರುವ ನೈಜ ಅನುಸರಣೆಯನ್ನು ಘೋಷಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಸತ್ಯವಾಗಿಯೂ ಹೇಳುತ್ತೇನೆ ಹಾಗೂ ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ, ನಾನು ಮತ್ತು ನನ್ನ ಜಮಾಅತಿನ ಜನರು ಮುಸ್ಲಿಮರಾಗಿರುವೆವು. ಒಬ್ಬ ನೈಜ ಮುಸ್ಲಿಮ್ ವಿಶ್ವಾಸವಿಡಬೇಕಾದ ರೀತಿಯಲ್ಲೇ ನಾವು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮತ್ತು ಪವಿತ್ರ ಖುರ್‌ಆನನ್ನು ನಂಬುತ್ತೇವೆ. ಒಂದು ಅಣುವಿನಷ್ಟಾದರೂ ಇಸ್ಲಾಮಿನ ಹೊರಗೆ ಹೆಜ್ಜೆ ಹಾಕುವುದು ನಾಶಕ್ಕೆ ಕಾರಣವಾಗಿಸುವುದು ಎಂದು ನಾನು ದೃಢವಾಗಿ ನಂಬುತ್ತೇನೆ. ಸಮೃದ್ಧಿಗಳೂ ಅನುಗ್ರಹಗಳೂ ಹಾಗೂ ಅಲ್ಲಾಹನ ಸಾಮೀಪ್ಯವೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಯಥಾರ್ಥ ರೀತಿಯಲ್ಲಿ ಅನುಸರಿಸುವುದರಿಂದ ಹಾಗೂ ಅವರನ್ನು ಪರಿಪೂರ್ಣವಾಗಿ ಪ್ರೀತಿಸುವುದರಿಂದ ಮಾತ್ರವೇ ಲಭಿಸುವುದು. ಅನ್ಯಥಾ ಲಭಿಸಲಾರದು ಎಂಬುದು ನನ್ನ ವಿಶ್ವಾಸವಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರ ಹೊರತು ಒಳಿತಿಗಿರುವ ಬೇರ ಯಾವುದೇ ಮಾರ್ಗವಿಲ್ಲ. ಹಝ್ರ‌ರತ್ ಈಸಾ ಅಲೈಹಿಸ್ಸಲಾಮ್ ಭೌತಿಕವಾದ ಶರೀರದೊಂದಿಗೆ ಆಕಾಶಕ್ಕೆ ಜೀವಂತವಾಗಿಯೇ ಹೋಗಿರುವರು ಹಾಗೂ ಈಗಲೂ ಜೀವಂತವಾಗಿರುವರು ಎಂದು ನಾನು ನಂಬುವುದಿಲ್ಲ ಎಂಬುದು ಸತ್ಯವೇ ಆಗಿದೆ. ಏಕೆಂದರೆ ಈ ರೀತಿ ನಂಬುವುದರಿಂದ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರರ ಗೌರವಕ್ಕೆ ಧಕ್ಕೆ ಉಂಟಾಗುತ್ತದೆ ಮತ್ತು ಅವರನ್ನು ತೀವ್ರವಾಗಿ ನಿಂದಿಸುವಂತಾಗುತ್ತದೆ. ನಾನು ಒಂದು ಕ್ಷಣಕ್ಕೂ ಈ ನಿಂದನೆಯನ್ನು ಸಹಿಸಲಾರೆನು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅರವತ್ತಮೂರನೇ ವಯಸ್ಸಲ್ಲಿ ಮರಣ ಹೊಂದಿದರು ಮತ್ತು ಮದೀನದಲ್ಲಿ ಅವರ ಪರಿಶುದ್ಧ ಖಬರ್ ಇದೆ ಎಂದು ಎಲ್ಲರಿಗೂ ಗೊತ್ತು. ಪ್ರತಿವರ್ಷ ಲಕ್ಷಗಟ್ಟಲೆ ಹಾಜಿಗಳು ಅಲ್ಲಿಗೆ ಹೋಗುತ್ತಾರೆ. ಈಸಾ ಮಸೀಹರು ಮರಣ ಹೊಂದಿರುವರು ಎಂದು ಹೇಳುವುದು ಅಸಭ್ಯತೆ ಆಗಿದ್ದರೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರರ ಕುರಿತು ಈ ಅಸಭ್ಯತೆ ಮತ್ತು ಅಗೌರವವನ್ನು ಹೇಗೆ ಸಹಿಸಲು ಸಾಧ್ಯ? ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣಪಟ್ಟರು ಎಂದು ನೀವು ಬಹಳ ಸಂತೋಷದಿಂದ ಹೇಳುತ್ತೀರಿ. ಮೌಲೂದ್ ಹೇಳುವವರು ಬಹಳ ಮಧುರಸ್ವರದಿಂದ ಮರಣದ ಘಟನೆಗಳನ್ನು ಪ್ರಸ್ತಾಪಿಸುತ್ತಾರೆ. ಪೈಗಂಬರರು ಮರಣಪಟ್ಟರು ಎಂದು ಯಾವುದೇ ಸಂಕೋಚವಿಲ್ಲದೆ ವಿರೋಧಿಗಳ ಮುಂದೆ ನೀವು ಸಮ್ಮತಿಸುತ್ತೀರಿ. ಹೀಗಿರುವಾಗ ಹಝ್ರ‌ರತ್ ಈಸಾ ಮಸೀಹರ ಮರಣದಿಂದ ಎಂತಹ ಅನಾಹುತ ಉಂಟಾಗುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಅದನ್ನು ಕೇಳುವಾಗ ನಿಮ್ಮ ಕಣ್ಣುಗಳು ಯಾಕೆ ಕೆಂಪಾಗುತ್ತವೆ?

ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈಗಲೂ ಜೀವಂತವಾಗಿದ್ದರೆ ಯಾವುದೇ ಆಕ್ಷೇಪಕ್ಕೆ ಎಡೆಯಿರಲಿಲ್ಲ. ಏಕೆಂದರೆ, ಅವರು ಮಹತ್ತಾದ ಸನ್ಮಾರ್ಗವನ್ನು ತಂದರು. ಅದಕ್ಕೆ ತುಲ್ಯವಾದದ್ದು ಲೋಕದಲ್ಲಿ ಲಭ್ಯವಲ್ಲ. ಹಝ್ರ‌ರತ್ ಆದಂ ಅಲೈಹಿಸ್ಸಲಾಮರ ಮೊದಲ್ಗೊಂಡು ಯಾರಿಂದಲೂ ತೋರಿಸಲಾಗದಂತಹ ಜೀವಿತ ಮಾದರಿಯನ್ನು ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದರು. ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಸ್ತಿತ್ವ ಲೋಕಕ್ಕೆ ಮತ್ತು ಮುಸ್ಲಿಮರಿಗೆ ಆವಶ್ಯವಿದ್ದ ರೀತಿಯಲ್ಲಿ ಈಸಾ ಮಸೀಹರ ಅಸ್ತಿತ್ವ ಲೋಕಕ್ಕೆ ಆವಶ್ಯವಿರಲಿಲ್ಲ. ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಸ್ತಿತ್ವ ಎಂತಹ ಅನುಗ್ರಹೀತವಾಗಿತ್ತೆಂದರೆ, ಅವರು ಮರಣಪಟ್ಟಾಗ ಸಹಾಬರ ಸ್ಥಿತಿ ಮತಿಗೆಟ್ಟವರಂತೆ ಆಗಿತ್ತು. ಎಲ್ಲಿಯವರೆಗೆ ಎಂದರೆ, ಹಝ್ರ‌ರತ್ ಉಮರ್ ರಝಿಯಲಾಹು ಅನ್‌ಹು ತನ್ನ ಖಡ್ಗವನ್ನು ಕವಚದಿಂದ ಹೊರತೆಗೆದು ಹೇಳಿದರು – ಯಾರಾದರೂ ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣವನ್ನಪ್ಪಿದರು ಎಂದು ಹೇಳಿದರೆ, ಅವನ ತಲೆಯನ್ನು ಬೇರ್ಪಡಿಸುವೆ ಎಂದು. ಇಂತಹ ಆವೇಶದ ಸಮಯದಲ್ಲಿ ಅಲ್ಲಾಹನು ಹಝ್ರ‌ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರಿಗೆ ಒಂದು ವಿಶೇಷವಾದ ಪ್ರಕಾಶ ಮತ್ತು ಸೂಕ್ಷ್ಮಜ್ಞಾನವನ್ನು ನೀಡಿದನು. ಅವರು ಎಲ್ಲರನ್ನು ಒಟ್ಟುಸೇರಿಸಿ ಖುತ್‌ಬ ನೀಡಿದರು. ಅಲ್ಲಿ ಈ ವಚನವನ್ನು ಓದಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್‌ಖಬ್‌ಲಿಹಿರ್ರುಸುಲ್**. ಎಂದರೆ ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ಪ್ರವಾದಿಯಾಗಿರುವರು. ಅವರಿಗೆ ಮುಂಚಿತವಾಗಿ ಬಂದ ಎಲ್ಲ ಪ್ರವಾದಿಗಳು ಗತಿಸಿಹೋಗಿರುವರು. ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣಹೊಂದಿದಾಗ ಹಝ್ರ‌ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರು ಏಕೆ ಈ ವಚನವನ್ನು ಓದಿದ್ದರು ಮತ್ತು ಅವರ ಉದ್ದೇಶ ಹಾಗೂ ಇಚ್ಛೆಯೇನಾಗಿತ್ತೆಂದು ಈಗ ನೀವು ಚಿಂತಿಸಿರಿ ಮತ್ತು ಆಲೋಚಿಸಿ ಹೇಳಿರಿ. ಅದು ಕೂಡ ಎಲ್ಲ ಸಹಾಬಿವರ್ಯರು ಅಲ್ಲಿ ಉಪಸ್ಥಿತರಿದ್ದ ಸಂದರ್ಭದಲ್ಲಿ. ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದಿಂದ ಸಹಾಬಿವರ್ಯರ ಹೃದಯದಲ್ಲಿ ತುಂಬ ದುಃಖವಿತ್ತು. ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ವಾರ್ತೆ ಕೇಳಲು ಅವರು ಇಷ್ಟಪಡುತ್ತಿರಲಿಲ್ಲ. ಸಹಾಬಿವರ್ಯರ ಇಂತಹ ಅವಸ್ಥೆ, ವಿಶೇಷವಾಗಿ ಹಝ್ರ‌ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಇಂತಹ ಆವೇಶ ಮತ್ತು ಕೋಪದ ಸ್ಥಿತಿಯೂ ಈ ಆಯತ್ತಿನಿಂದ ಮಾತ್ರವೇ ಶಮನಗೊಂಡಿತು. ಅಂತಹ ಸನ್ನಿವೇಶದಲ್ಲಿ ಹಝ್ರ‌ರತ್ ಈಸಾ ಅಲೈಹಿಸ್ಸಲಾಮರು ಜೀವಂತವಾಗಿರುವರು ಎಂದು ಅವರು ತಿಳಿದಿದ್ದರೆ ಅಥವಾ ಅವರು ಹಾಗೆ ನಂಬಿದ್ದರೆ ಅವರು ಜೀವಂತವೇ ಸಾವನ್ನಪ್ಪುತ್ತಿದ್ದರು. ಅವರು ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮಿಯಾಗಿದ್ದರು. ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತದ ಹೊರತು ಬೇರೆಯವರ ಬದುಕನ್ನು ಸಹಿಸಲು ಸಿದ್ಧರಿರಲಿಲ್ಲ. ತಮ್ಮ ಕಣ್ಮುಂದೆ ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮರಣಹೊಂದಿದ್ದಾಗಿ ನೋಡಿ ಹೇಗೆ ತಾನೆ ಅವರು ಈಸಾ ಮಸೀಹರು ಈಗಲೂ ಜೀವಂತವಾಗಿರುವರು ಎಂದು ನಂಬಲು ಸಾಧ್ಯ. ಹಝ್ರ‌ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರವರು ಖುತ್‌ಬ ಓದಿದಾಗ ಅವರ ಆವೇಶ ನಂದಿಹೋಯಿತು. ಆ ಸಮಯದಲ್ಲಿ ಸಹಾಬಿವರ್ಯರು ಮದೀನದ ಗಲ್ಲಿಗಳಲ್ಲಿ ಈ ಆಯತನ್ನು ಓದುತ್ತಾ ಸುತ್ತುತ್ತಿದ್ದರು. ಈ ವಚನ ಇಂದೇ ಅವತೀರ್ಣಗೊಂಡಿತು ಎಂಬಂತೆ ಭಾವಿಸುತ್ತಿದ್ದರು. ಹೀಗೆ ಇದು ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ಕುರಿತು ಲೋಕದಲ್ಲಿ ನಡೆದ ಮೊದಲ ಒಮ್ಮತಾಭಿಪ್ರಾಯ (ಇಜ್‌ಮಾಅ್) ಆಗಿತ್ತು. ಅದರೊಂದಿಗೆ ಹಝ್ರ‌ರತ್ ಈಸಾ ಮಸೀಹರ ಮರಣದ ಬಗ್ಗೆ ಸಹ ಸ್ಪಷ್ಟವಾದ ತೀರ್ಮಾನವಾಯಿತು.

ಹಝ್ರ‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಪದವಿಯನ್ನು ಪ್ರಸ್ತಾಪಿಸುತ್ತಾ ಹಝ್ರ‌ರತ್

ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಎಲ್ಲರಿಗಿಂತ ಪರಿಪೂರ್ಣವಾದ ಮನುಷ್ಯ, ಪರಿಪೂರ್ಣವಾದ ನಬಿ ಮತ್ತು ಪರಿಪೂರ್ಣವಾದ ಅನುಗ್ರಹಗಳೊಂದಿಗೆ ಬಂದ ವ್ಯಕ್ತಿ, ಯಾರ ಆಧ್ಯಾತ್ಮಿಕ ಆವಿರ್ಭಾವ ಮತ್ತು ಪುನರುತ್ಥಾನದಿಂದ ಲೋಕದಲ್ಲಿ ಮೊದಲ ಖಿಯಾಮತ್ ಪ್ರಕಟವಾಯಿತೋ, ಸತ್ತುಹೋದ ಒಂದು ಲೋಕವೇ ಜೀವಂತವಾಯಿತೋ ಎಂದರೆ ಆಧ್ಯಾತ್ಮಿಕ ಜೀವನ ಅವರಿಗೆ ಲಭಿಸಿತೋ ಆ ಅನುಗ್ರಹೀತ ಪ್ರವಾದಿ ಹಝ್ರತ್ ಖಾತಮುಲ್ ಅಂಬಿಯಾ ಇಮಾಮುಲ್ ಅಸ್ಫಿಯ, ಪ್ರವಾದಿಗಳಲ್ಲಿ ಶ್ರೇಷ್ಠರೂ, ಪ್ರವಾದಿಗಳ ಹೆಮ್ಮೆಯೂ ಆದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುವರು. ಓ ಸ್ನೇಹನಿಧಿಯಾದ ಅಲ್ಲಾಹ್, ಈ ಪ್ರಿಯ ನಬಿಯ ಮೇಲೆ ಲೋಕಾರಂಭದಿಂದ ಯಾರಿಗೂ ನೀಡದಷ್ಟು ಕಾರುಣ್ಯ ಮತ್ತು ಆಶೀರ್ವಾದವನ್ನು ವರ್ಷಿಸು. ಈ ವೈಭವಶಾಲಿ ನಬಿ ಈ ಲೋಕಕ್ಕೆ ಬರದಿರುತ್ತಿದ್ದರೆ, ಲೋಕದಲ್ಲಿ ಬಂದಂತಹ ಸಣ್ಣ ಸಣ್ಣ ಪ್ರವಾದಿಗಳಾದ ಯೂನುಸ್, ಅಯ್ಯೂಬ್, ಈಸಾ ಮಸೀಹ್, ಮಲಾಕಿ, ಯಹ್ಯಾ, ಝುಕರಿಯ್ಯಾ ಮುಂತಾದವರ ಸತ್ಯತೆಗೆ ನಮ್ಮ ಬಳಿ ಯಾವುದೇ ಪುರಾವೆ ಇರುತ್ತಿರಲಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮಾಡಿದ ಉಪಕಾರದಿಂದ ಅಲ್ಲಾಹನ ಸಾಮೀಪ್ಯ ಗಳಿಸಿದ ಮತ್ತು ಪರಿಶುದ್ಧರಾದ ಈ ಎಲ್ಲ ಪ್ರಿಯದಾಸರನ್ನು ಲೋಕದಲ್ಲಿ ಸತ್ಯವಂತರೆಂದು ತಿಳಿಯಲಾಯಿತು. **ಅಲ್ಲಾಹುಮ್ಮ ಸಲ್ಲಿ ವ ಸಲ್ಲಿಮ್ ವ ಬಾರಿಕ್ ಅಲೈಹಿ ವ ಆಲಿಹಿ ವ ಅಸ್‌ಹಾಬಿಹಿ ಅಜ್‌ಮಈನ್. ವ ಆಖಿರು ದಅ್‌ವಾನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.**

ಅಲ್ಲಾಹನು ನಮಗೆ ಸದಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಮಹಿಮೆಯ ಯಥಾರ್ಥ ಅರಿವು ನೀಡುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡುತ್ತಾ ಇರಲು ಸೌಭಾಗ್ಯ ನೀಡಲಿ. ಅಲ್ಲಾಹನ ಮುಂದೆ ನಾವು ಹಿಂದಿಗಿಂತ ಹೆಚ್ಚಾಗಿ ಬಾಗುವವರಾಗಲಿ. ನಾವು ನಮ್ಮ ನಡೆವಳಿಕೆಗಳಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಇರುವ ಪ್ರೀತಿಯನ್ನು ಸಾಬೀತುಗೊಳಿಸಲು ಇರುವ ಮಾರ್ಗ ಇದೇ ಆಗಿದೆ. ಈ ಪ್ರೇಮವನ್ನು ನಾವು ನಮ್ಮ ಹೃದಯದಲ್ಲಿ ಇರಿಸಿದರೆ ನಾವು ನಮ್ಮ ವಿರೋಧಿಗಳಿಗೆ ಜವಾಬು ಕೊಡುವವರಾಗುವೆವು. ಎಂದರೆ ನಮ್ಮ ಕರ್ಮಪರವಾದ ಸ್ಥಿತಿ ನಮ್ಮ ವಿರೋಧಿಗಳ ವಿರೋಧಕ್ಕೆ ಉತ್ತರ ಕೊಡುವುದು. ಅಲ್ಲಾಹನು ನಮಗೆ ಅದರ ತೌಫೀಕ್ ನೀಡಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)
*At, Masjid Mubarak, Islamabad, Tilford, UK, On 31-07-2020*
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email*****:** *khutuba.kannada@gmail.com*
**You can find all the Sermons archived at**: www.alislam.org/friday-sermon